ಅನೇಕ ಗಣ್ಯವ್ಯಕ್ತಿಗಳು ಅವರ ಶಿಷ್ಯರಾದರು. ತಮ್ಮ ಗೈರು ಹಾಜರಿಯಲ್ಲಿ ಅಮೆರಿಕದ ತಮ್ಮ ಧರ್ಮಪ್ರಚಾರ ಕಾರ್ಯವನ್ನು ಮುಂದುವರೆಸಿಕೊಂಡು ಹೋಗಲು ಕೆಲವರಿಗೆ ತರಬೇತಿ ನೀಡಿ, ಅವರಿಗೆ ಸಂನ್ಯಾಸ ದೀಕ್ಷೆ ನೀಡುವ ಇಚ್ಛೆಯಿತ್ತು ಸ್ವಾಮೀಜಿಗೆ. ಅದರಂತೆ, ೨೫ ವರ್ಷಗಳಿಂದ ಅಮೆರಿಕದಲ್ಲಿಯೇ ನೆಲೆಸಿದ್ದ, ಫ್ರೆಂಚ್ ದೇಶಕ್ಕೆ ಸೇರಿದ ಮ್ಯಾಡಂ ಮೇರಿ ಲೂಯಿಸ್ ಎಂಬುವವಳಿಗೆ 'ಅಭಯಾನಂದ' ಎಂದು ಹೆಸರು ನೀಡಿ ತಮ್ಮ ಸಂನ್ಯಾಸಿ ಶಿಷ್ಯಳನ್ನಾಗಿ ಸ್ವೀಕರಿಸಿದರು.

ತುಂಬ ಬುದ್ಧಿವಂತೆಯಾದ ಆಕೆಯ ವ್ಯಕ್ತಿತ್ವವು ಜನರ ಮಧ್ಯೆ ಎದ್ದುಕಾಣುವಂತೆ ಇತ್ತು. ಸ್ವಾಮೀಜಿಯ ಶಿಷ್ಯಳಾಗುವ ಮೊದಲು ಎಲ್ಲರ ಗಮನ ಸೆಳೆಯುವ ತನ್ನ ವ್ಯಕ್ತಿತ್ವದ ಬಗ್ಗೆ, ಸ್ವಲ್ಪ ಹೆಚ್ಚಾಗಿಯೇ ಅಭಿಮಾನವಿದ್ದ ಆಕೆ, ಅನಂತರ ನಿಧಾನವಾಗಿ ಪರಿವರ್ತನೆ ಹೊಂದಿದಳು. ಸ್ವಾಮೀಜಿ ಆಕೆಗೆ ಸಹಸ್ರದ್ವೀಪೋದ್ಯಾನದಲ್ಲಿ ಸಂನ್ಯಾಸ ದೀಕ್ಷೆ ನೀಡಿದರು.

ಸ್ವಾಮೀಜಿಯ ಗೈರುಹಾಜರಿಯಲ್ಲಿ ಇವಳು ವೇದಾಂತದ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದಳು. ಆಕೆಯ ಬುದ್ಧಿಮತ್ತೆಯನ್ನು ಶ್ಲಾಘಿಸುತ್ತ ಸ್ವಾಮಿ ವಿವೇಕಾನಂದರು ಹೀಗೆ ಬರೆಯುತ್ತಾರೆ: "ಅಭಯಾನಂದ ಎಷ್ಟು ಬೇಗ ಸಾಂಖ್ಯ ಮುಂತಾದ ತತ್ತ್ವಶಾಸ್ತ್ರಗಳನ್ನು ಕರಗತ ಮಾಡಿಕೊಂಡುಬಿಟ್ಟಳು! ಅಷ್ಟೇ ಅಲ್ಲ, ಧ್ಯಾನವನ್ನೂ ಅಭ್ಯಾಸ ಮಾಡಿದ್ದಾಳೆ. ನಿಜವಾಗಲೂ ಬಹಳ ಕಷ್ಟಪಟ್ಟಿರಬೇಕು, ಪಾಪ!"

ಸ್ವಾಮೀಜಿಯವರ ವೇದಾಂತ ಪ್ರಚಾರಕಾರ್ಯಕ್ಕೆ ಮೇರಿ ಲೂಯಿಸ್ ತನ್ನ ತನುಮನಗಳನ್ನೇ ಅರ್ಪಿಸಿದ್ದಳೆಂದರೆ ಅತಿಶಯೋಕ್ತಿಯಲ್ಲ. ಅವಳು ಒಂದಿಬ್ಬರಿಗೆ ಬ್ರಹ್ಮಚರ್ಯ ದೀಕ್ಷೆಯನ್ನೂ ನೀಡಿದ್ದಳು. ಬ್ರೂಕ್ಲಿನ್‌ನಲ್ಲಿ ೧೮೯೬ ರ ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಭಕ್ತಿಯೋಗ ಹಾಗೂ ರಾಜಯೋಗದ ತರಗತಿಗಳನ್ನು ಕೂಡ ನಡೆಸಿದಳು.

## ಮೇಡಂ ಇ. ಕಾಲ್ವೆ

ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣವನ್ನು ಕೇಳಿ ಅವರ ತುಂಬು ಪ್ರಶಂಸಕರಾದವರಲ್ಲಿ ಮೇಡಂ.ಇ.ಕಾಲ್ವೆ ಕೂಡ ಒಬ್ಬಳು. ಈಕೆ ಪ್ರತಿಭಾಶಾಲಿಯಾದ ಒಬ್ಬ ಸಂಗೀತಗಾರ್ತಿ. ೧೮೯೦ ರಲ್ಲಿ ಆಕೆ ಯುರೋಪ್ ಹಾಗೂ ನ್ಯೂಯಾರ್ಕ್‌ಗಳಲ್ಲಿ ತನ್ನ ಗಾನಮಾಧುರ್ಯದಿಂದ ಜಯಭೇರಿ ಹೊಡೆದು, ಯಶಸ್ಸಿನ ಶಿಖರದ ತುತ್ತತುದಿಯಲ್ಲಿದ್ದಳು. ಇಡೀ ಪ್ರಪಂಚವೇ ಅವಳ ಪದತಲದಲ್ಲಿತ್ತು. ಸಮಾಜದ ಹಲವಾರು ಗಣ್ಯವ್ಯಕ್ತಿಗಳು ಆಕೆಯ ಆರಾಧಕರಾಗಿದ್ದರು. ಸ್ವಾಮೀಜಿಯವರ ಜೊತೆ ಮೊದಲ ಭೇಟಿಯ ವಿವರಗಳನ್ನು ಆಕೆಯ ಮಾತಿನಲ್ಲೇ ಕೇಳೋಣ:

"ಚಿಕಾಗೋ ಉಪನ್ಯಾಸ ಮಾಡುವಾಗ ನಾನಲ್ಲಿದ್ದೆ. ಆಗ ನನ್ನ ಮನಸ್ಸಿನಲ್ಲಿ ಬಹಳ ದುಗುಡವಿತ್ತು. ನಿಜವಾಗಿಯೂ **'ಭಗವಂತನೊಡನೆ ನಡೆದ ವ್ಯಕ್ತಿ'** ಯೊಬ್ಬನನ್ನು ಅರಿಯುವ


ಮೇಡಂ ಇ.ಕಾಲ್ವೆ

ಮಹದಾನಂದ ಮತ್ತು ಸೌಭಾಗ್ಯ ನನ್ನದಾಗಿತ್ತು. ನನ್ನ ಆಧ್ಯಾತ್ಮಿಕ ಜೀವನದ ಮೇಲೆ ಸ್ವಾಮೀಜಿಯವರ ಪ್ರಭಾವ ಅತ್ಯಂತ ಆಳವಾದದ್ದು. ನನ್ನ ಆಧ್ಯಾತ್ಮಿಕ ಭಾವನೆಗಳನ್ನು, ಆದರ್ಶಗಳನ್ನು ಅವರು ವಿಶಾಲಗೊಳಿಸಿದರು, ಜೀವಂತಗೊಳಿಸಿದರು. ನಾನು ಸಂದರ್ಶನಕ್ಕೆ ಹೋದ ದಿನ ಸ್ವಾಮೀಜಿ ಧ್ಯಾನಾವಸ್ಥೆಯಲ್ಲಿ ಕುಳಿತಿದ್ದರು. ಅನಂತರ ನನ್ನ ಹೆಸರನ್ನೂ ಕೇಳದೆ ಆ ಮಹಾಮಹಿಮರು, ನಿರಾತಂಕವಾಗಿ ಮೆಲುದನಿಯಲ್ಲಿ, ನನ್ನೆಲ್ಲ ನಿಗೂಢ ಸಮಸ್ಯೆಗಳನ್ನೂ, ಆತಂಕಗಳನ್ನೂ ಹೇಳತೊಡಗಿದರು. ನನ್ನ ಅತ್ಯಂತ ನಿಕಟವರ್ತಿಗಳಿಗೂ ತಿಳಿದಿರದ ವಿಷಯಗಳನ್ನು ವಿವರಿಸಲು ಆರಂಭಿಸಿದರು. ಇದೊಂದು ಪವಾಡ, ಅಪ್ರಾಕೃತ ಎಂದು ನನಗೆ ಅನ್ನಿಸಿತು. ಅವರ ಮಾತು ಮತ್ತು ವ್ಯಕ್ತಿತ್ವಗಳಿಂದ ತುಂಬಾ ಪ್ರಭಾವಿತಳಾಗಿ ಹೊರಬಂದೆ. ನನ್ನ ಮಿದುಳನ್ನು ಕಿತ್ತು ತಿನ್ನುತ್ತಿದ್ದ ಎಲ್ಲ ತೊಡಕುಗಳನ್ನು ಸ್ವಾಮೀಜಿ ನಿವಾರಿಸಿ, ಅವುಗಳ ಸ್ಥಾನದಲ್ಲಿ ತಮ್ಮ ಸ್ಪಷ್ಟ, ಶಾಂತ ಚಿಂತನೆಗಳನ್ನು ತುಂಬಿದರು. ಇದರಿಂದ ನಾನು ಮತ್ತೆ ಸಚೇತನಳಾದೆ, ಲವಲವಿಕೆಯವಳಾದೆ. ಇದೆಲ್ಲಾ ಅವರ ಶಕ್ತಿಯುತ ಇಚ್ಛಾಶಕ್ತಿಯ ಪರಿಣಾಮವೇ ಸರಿ."

ಸ್ವಾಮೀಜಿಯವರನ್ನು ಮೇಡಮ್ ಕಾಲ್ವೆ ಲ್ಯಾಟಿನ್ ಭಾಷೆಯಲ್ಲಿ 'ಮಾನ್ ಪಿಯರ್' ಎಂದರೆ 'ನನ್ನ ತಂದೆ' ಎಂದು ಕರೆಯುತ್ತಿದ್ದಳು!

*(ಮುಂದುವರಿಯುವುದು)*



# ಕರ್ನಾಟಕದಲ್ಲಿ ರಾಮಕೃಷ್ಣ ಮಹಾಸಂಘದ ಕೇಂದ್ರಗಳು

ಸುರೇಶ್ ಮೂನ

ಪೊನ್ನಂಪೇಟೆಯ ನೂತನ ದೇಗುಲ

(ಹಿಂದಿನ ಸಂಚಿಕೆಯಿಂದ)

### ಶ್ರೀರಾಮಕೃಷ್ಣ ಶಾರದಾಶ್ರಮ, ಪೊನ್ನಂಪೇಟೆ

ಕೊಡಗು ಪ್ರದೇಶದಲ್ಲಿ ದಿವ್ಯತ್ರಯರ ಜೀವನ ಸಂದೇಶಗಳಿಂದ ಪ್ರಭಾವಿತರಾದ ಅನೇಕ ಭಕ್ತರು ಅಲ್ಲಿಯೂ ರಾಮಕೃಷ್ಣ ಮಹಾಸಂಘದ ಒಂದು ಶಾಖೆಯನ್ನು ಹೊಂದುವ ಅಭಿಲಾಷೆಯನ್ನು ಹೊಂದಿದ್ದರು. ಅದಕ್ಕೆ ಪೂರಕವಾಗಿ ಸ್ವಾಮಿ ನಿರ್ಮಲಾನಂದಜಿಯವರು ಧರ್ಮಪ್ರಚಾರಕ್ಕಾಗಿ ಕೊಡಗಿನಲ್ಲಿ ಸಂಚಾರವನ್ನು ಕೈಗೊಂಡರು. ಆಗ ಶ್ರೀ ಅಚ್ಚಿಯಂಡ ಕಾಳಮ್ಮಯ್ಯ, ಕೆ.ಜಿ.ಚೆಂಗಪ್ಪ, ಡಾ.ಎ.ಎಂ.ಮುತ್ತಪ್ಪ ಮೊದಲಾದ ಸ್ಥಳೀಯ ವರಿಷ್ಠರು ಸ್ವಾಮೀಜಿಯವರನ್ನು ಭೇಟಿ ಮಾಡಿ ತಮ್ಮ ಅಭಿಲಾಷೆಯನ್ನು ಅವರ ಮುಂದಿಟ್ಟರು. ಅಚ್ಚಿಯಂಡ ಕಾಳಮ್ಮಯ್ಯನವರು ಪೊನ್ನಂಪೇಟೆಯಲ್ಲಿನ ತಮ್ಮ ಮೂರು ಎಕರೆ ಪ್ರದೇಶವನ್ನು ಇದಕ್ಕಾಗಿ ದಾನ ಮಾಡುವುದಾಗಿ ತಿಳಿಸಿದರು. ಅಲ್ಲಿನ ಪ್ರಶಾಂತ ವಾತಾವರಣವನ್ನು ಕಂಡು ಸಂತುಷ್ಟರಾದ ಸ್ವಾಮಿ ನಿರ್ಮಲಾನಂದಜಿಯವರು, "ಆಶ್ರಮದ ಸ್ಥಾಪನೆಯೆಂದರೆ ಶ್ರೀಗುರುಮಹಾರಾಜರ ಕೃಪಾಸಂಕೇತ. ಆಶ್ರಮದ ನಿರ್ಮಾಣ ಕಾರ್ಯ ಶೀಘ್ರವಾಗಿ ಆಗಲಿ" ಎಂದು ಹಾರೈಸಿದರು. ಅಚ್ಚಿಯಂಡ ಕಾಳಮ್ಮಯ್ಯನವರು ಊರಿನವರ ಬೆಂಬಲದೊಂದಿಗೆ ಆಶ್ರಮದ ಪ್ರಾರಂಭಕ್ಕಾಗಿ ಕಾರ್ಯೋನ್ಮುಖರಾದರು. ೧೯೨೭ ರ ಫೆಬ್ರವರಿ ೭ ರಂದು ಸ್ವಾಮಿ ನಿರ್ಮಲಾನಂದರೇ ಪೊನ್ನಂಪೇಟೆ ರಾಮಕೃಷ್ಣ ಆಶ್ರಮದ ಶಂಕುಸ್ಥಾಪನೆಯನ್ನು ಮಾಡಿ ಹರಸಿದರು. ಅಲ್ಲಿನ ಭಕ್ತರ ಸಹಕಾರ ಹಾಗೂ ಉತ್ಸಾಹಗಳಿಂದಾಗಿ ಆಶ್ರಮದ ಕಟ್ಟಡದ ನಿರ್ಮಾಣಕಾರ್ಯ ಬೇಗನೆ ಮುಗಿದು, ೧೦. ೬. ೧೯೨೭ ರಂದು ಅಪಾರ ಸಂಖ್ಯೆಯಲ್ಲಿ ಸೇರಿದ್ದ ಭಕ್ತರ ಸಮ್ಮುಖದಲ್ಲಿ, ಸ್ವಾಮಿ ನಿರ್ಮಲಾನಂದಜಿಯವರೇ ಉದ್ಘಾಟನಾ ಕಾರ್ಯಕ್ರಮವನ್ನು ನೆರವೇರಿಸಿದರು.

ಈ ಆಶ್ರಮವು ಕಾರ್ಯಾರಂಭ ಮಾಡಿದನಂತರ ಸ್ವಾಮಿ ಶಾಂಭವಾನಂದಜಿ ಅವರು ಅದರ ಪ್ರಥಮ ಅಧ್ಯಕ್ಷರಾದರು. ಉತ್ಸಾಹಿಗಳೂ, ಆತ್ಮಶಕ್ತಿಸಂಪನ್ನರೂ ಆಗಿದ್ದ ಇವರು ಕೊಡಗಿನಾದ್ಯಂತ ಆಧ್ಯಾತ್ಮಿಕ, ಸಾಮಾಜಿಕ, ನೈತಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಹಲವಾರು ರಚನಾತ್ಮಕ ಯೋಜನೆಗಳನ್ನು ಹಮ್ಮಿಕೊಂಡರು. ಕೊಡಗಿನಲ್ಲಿ ಹರಡಿದ್ದ ಭೀಕರ ಕಾಯಿಲೆಯಾದ ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮವನ್ನು ಕೈಗೊಂಡು, ಆ ಪ್ರದೇಶದಾದ್ಯಂತ ಸಂಚರಿಸಿದರು. ಚೊಳ್ಳೆಪಾಟ್ (ಸೊಳ್ಳೆಹಾಡು) ಎಂಬ ಕೊಡವ ಭಾಷೆಯ ಹಾಡನ್ನು ರಚಿಸಿ ಜನರನ್ನು ಎಚ್ಚರಿಸಿದರು. ಆಶ್ರಮದಲ್ಲಿ ಆಧುನಿಕ ಜೇನು ಕೃಷಿಯ ಪ್ರಾಯೋಗಿಕ ಕೇಂದ್ರವನ್ನೂ ಪ್ರಾರಂಭಿಸಿದರು. ಸ್ಥಳೀಯರ ಬೆಂಬಲದೊಂದಿಗೆ ೧೯೩೬ ರಲ್ಲಿ ಜೇನು ಮತ್ತು ಮೇಣ ಉತ್ಪಾದಕರ ಸಂಘವನ್ನು ಸ್ಥಾಪಿಸಿದರು. ಇಲ್ಲಿನ ಅಸ್ಪೃಶ್ಯತೆ ನಿವಾರಣಾ ಕಾರ್ಯಕ್ರಮಕ್ಕೆ ಮಾರ್ಗದರ್ಶನ ನೀಡಲು ಮಹಾತ್ಮ ಗಾಂಧೀಜಿಯವರು ತಮಿಳುನಾಡಿನ ಕೂನೂರಿನ ಮಾರ್ಗವಾಗಿ ಕೊಡಗಿಗೆ ಬಂದಿದ್ದರು. ಈ ಆಶ್ರಮದಲ್ಲಿಯೇ ತಂಗಿದ್ದ ಗಾಂಧೀಜಿ, ಅಸ್ಪೃಶ್ಯರಿಗಾಗಿ ಇಲ್ಲಿ ಸಲ್ಲುತ್ತಿರುವ ಸೇವೆಯನ್ನು ಕಂಡು ಸಂತೋಷಗೊಂಡಿದ್ದರು. ಈ ಸಂದರ್ಭದಲ್ಲಿ ನಡೆದ ಒಂದು ಸಭೆಗೆ ಸುತ್ತಮುತ್ತಲ ಸ್ಥಳಗಳಿಂದ ೧೦,೦೦೦ ಜನರು ಬಂದು ನೆರೆದಿದ್ದರು. ಆಚಾರ್ಯ ವಿನೋಬಾ ಭಾವೆಯವರೂ ಈ ಆಶ್ರಮದಲ್ಲಿ ತಂಗಿದ್ದ ಬಗ್ಗೆ ದಾಖಲೆ ಇದೆ. ೧೯೪೨ ರಲ್ಲಿ ಇಲ್ಲಿ ಹೋಮಿಯೋಪತಿ ಚಿಕಿತ್ಸಾ ಕೇಂದ್ರ ಮತ್ತು ೧೯೪೭ ರಲ್ಲಿ ಅಲೋಪತಿ ಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸಲಾಯಿತು. ಕ್ರಮೇಣ ಇವು ಅಭಿವೃದ್ಧಿಗೊಂಡು ಈ ಜಿಲ್ಲೆಯ ಅತ್ಯಂತ ಉತ್ತಮ ಸೌಲಭ್ಯ ಹಾಗು ಸಲಕರಣೆಗಳುಳ್ಳ ಸುಸಜ್ಜಿತ ಆಸ್ಪತ್ರೆಯಾಗಿ ರೂಪುಗೊಂಡಿವೆ. ಈ ಆಶ್ರಮದಲ್ಲಿ

ಹಲವಾರು ಸತ್ಸಂಗಗಳು, ಶಿಬಿರಗಳು, ಭಕ್ತಸಮ್ಮೇಳನಗಳು, ಧಾರ್ಮಿಕ ಉಪನ್ಯಾಸಗಳು ಮುಂತಾದ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಆಯೋಜಿಸಲಾಗುತ್ತಿದೆ. ಅನೇಕ ಉಚಿತ ವೈದ್ಯಕೀಯ ಶಿಬಿರಗಳನ್ನು ಜಿಲ್ಲೆಯಾದ್ಯಂತ ನಡೆಸಲಾಗುತ್ತಿದೆ. ಸ್ವಾಮಿ ಪುರುಷೋತ್ತಮಾನಂದಜಿಯವರ ಪ್ರಯತ್ನದ ಫಲವಾಗಿ ೨೦೦೨ ರಲ್ಲಿ ಇಲ್ಲಿ ಒಂದು ಬಾಲಕಸಂಘ ಸಹ ಪ್ರಾರಂಭಗೊಂಡಿತು. ಮೌಲ್ಯಾಧಾರಿತ ಶಿಕ್ಷಣ, ಭಜನೆ, ಆಶ್ರಮದ ಕೈಂಕರ್ಯ, ಕ್ರೀಡೆ, ದೈಹಿಕ ವ್ಯಾಯಾಮ ಮುಂತಾದ ಕಾರ್ಯಕ್ರಮಗಳನ್ನು ಈ ಬಾಲಕಸಂಘ ನಡೆಸುತ್ತಿದೆ. ಇತ್ತೀಚಿಗೆ ಆಶ್ರಮದಲ್ಲಿ ಶ್ರೀರಾಮಕೃಷ್ಣರಿಗೆ ಅರ್ಪಿತವಾದ ಭವ್ಯ ದೇವಾಲಯವನ್ನು ನಿರ್ಮಿಸಲಾಯಿತು. ದೇವಸ್ಥಾನದಲ್ಲಿ ಶ್ರೀರಾಮಕೃಷ್ಣರ ಮೂರ್ತಿಯ ಪ್ರತಿಷ್ಠಾಪನೆಯೂ ನಡೆಯಿತು. ಈ ಮಠದ ಪ್ರಸ್ತುತ ಅಧ್ಯಕ್ಷರಾಗಿರುವವರು **ಸ್ವಾಮಿ ಜಗದಾತ್ಮಾನಂದಜಿ** ಅವರು.

## ರಾಮಕೃಷ್ಣ ಮಠ ಮತ್ತು ಮಿಷನ್, ಮಂಗಳೂರು

೧೯೪೦ ರ ದಶಕದಲ್ಲಿ ಮಂಗಳೂರಿನಲ್ಲಿ ಸಾಹುಕಾರ್ ವೆಂಕಟೇಶ್ ಪೈ ಎಂಬುವವರು ಬಡಮಕ್ಕಳ ಕಲ್ಯಾಣಕ್ಕಾಗಿ ಒಂದು ಬಾಲಕಾಶ್ರಮವನ್ನು ಪ್ರಾರಂಭಿಸಿದರು. ಇಲ್ಲಿ ಮಕ್ಕಳಿಗೆ ಉಚಿತವಾಗಿ ಊಟ, ವಸತಿಗಳನ್ನು ನೀಡಲಾಗುತ್ತಿತ್ತು. ಅನಂತರ ಇದನ್ನು ವ್ಯವಸ್ಥಿತವಾಗಿ ನಿರ್ವಹಿಸಲು, 'ಹಿಂದೂ ಸೇವಾಸಂಘ' ಎಂಬ ವಿಶ್ವಸ್ತ ಮಂಡಳಿಯನ್ನು ರೂಪಿಸಿ ಅದರ ನಿರ್ವಹಣೆಗೆ ಬಾಲಕಾಶ್ರಮವನ್ನು ಒಪ್ಪಿಸಲಾಯಿತು. ಇದೇ ವೇಳೆಗೆ ಮಂಗಳೂರಿನಲ್ಲಿ ರಾಮಕೃಷ್ಣ ಮಠದ ಕೇಂದ್ರವೊಂದನ್ನು ಪ್ರಾರಂಭಿಸುವಂತೆ ಇಲ್ಲಿನ ಜನತೆ ಮಾಡಿದ ಮನವಿಯ ಫಲವಾಗಿ ಬೇಲೂರು ಮಠದಿಂದ ಸ್ವಾಮಿ ವಿಮಲಾನಂದಜಿಯವರನ್ನು ಕಳಿಸಿಕೊಡಲಾಯಿತು. ೩. ೬. ೧೯೪೭ ರಂದು ಮಂಗಳೂರಿನ ರಾಮಕೃಷ್ಣ ಮಠವು ಲಾಲ್‌ಬಾಗ್‌ನ ಒಂದು ಬಾಡಿಗೆ ಮನೆಯಲ್ಲಿ ಪ್ರಾರಂಭಗೊಂಡಿತು. ಈ ಮಠದಲ್ಲಿ ಸ್ವಾಮಿ ವಿಮಲಾನಂದಜಿಯವರು ಕೆಲವು ಬ್ರಹ್ಮಚಾರಿಗಳ ಸಹಾಯದಿಂದ ಪೂಜೆ, ಭಜನೆ, ಪಾಠ, ಪ್ರವಚನಗಳನ್ನು ನಡೆಸುತ್ತಾ ಬಂದರು. ಸ್ವಾಮೀಜಿಯವರು ಪ್ರಾರಂಭದಲ್ಲಿ, ಆಂಗ್ಲಭಾಷೆಯಲ್ಲೇ ಪ್ರವಚನ ನೀಡುತ್ತಿದ್ದರಾದರೂ, ಅನಂತರ ಕನ್ನಡ ಭಾಷೆಯನ್ನೂ ಕಲಿತು ಅದರಲ್ಲಿಯೇ ಪ್ರವಚನಗಳನ್ನು ನೀಡಲಾರಂಭಿಸಿದರು. ಹೀಗೆ ಮಂಗಳೂರಿನಲ್ಲಿ ರಾಮಕೃಷ್ಣ ವಿವೇಕಾನಂದ ವಿಚಾರಧಾರೆಯ ಪ್ರಚಾರಕ್ಕಾಗಿ ಇವರು ವಿಶೇಷವಾಗಿ ಶ್ರಮಿಸಿದರು.

ಈ ಮಧ್ಯೆ ಸಾಹುಕಾರ್ ವೆಂಕಟೇಶ್ ಪೈ ಅವರು ಹಿಂದೂ ಸೇವಾಸಂಘದ ಮೂಲಕ ನಿರ್ವಹಿಸಲ್ಪಡುತ್ತಿದ್ದ ಬಾಲಕಾಶ್ರಮವನ್ನು ರಾಮಕೃಷ್ಣ ಮಠಕ್ಕೆ ಒಪ್ಪಿಸಲು ಮುಂದಾದರು. ಹೀಗಾಗಿ ೧೧.೮.೧೯೫೧ ರಂದು ಬಾಲಕಾಶ್ರಮದ ಜೊತೆಗೆ ಏಳು ಎಕರೆಗಳಷ್ಟು ಜಮೀನು ಹಾಗೂ ಅದರಲ್ಲಿರುವ ಒಂದು ಸುಂದರವಾದ ಕಟ್ಟಡ – ಇವುಗಳನ್ನು ರಾಮಕೃಷ್ಣ ಮಹಾಸಂಘಕ್ಕೆ ಹಸ್ತಾಂತರಿಸಿದರು. ಸ್ಥಳೀಯ ಬಡ ಜನತೆಗೆ ವೈದ್ಯಕೀಯ ನೆರವಿನ ಅಗತ್ಯವನ್ನು ಮನಗಂಡ ಆಶ್ರಮವು ೩೦.೪.೧೯೫೫ ರಂದು ಉಚಿತ ಚಿಕಿತ್ಸಾಲಯವನ್ನು ಪ್ರಾರಂಭಿಸಿತು. ನಿಷ್ಠಾವಂತ ವೈದ್ಯರಿಂದ ಕೂಡಿ, ಜಾತಿಮತ ಭೇದವಿಲ್ಲದೆ, ರೋಗಿಗಳ ಸೇವೆಯಲ್ಲಿ ನಿರತವಾದ ಚಿಕಿತ್ಸಾಲಯವು ಬಹು ಬೇಗ ಜನಪ್ರಿಯವಾಯಿತು. ಸ್ವಾಮಿ ವಿವೇಕಾನಂದರ ಜನ್ಮಶತಾಬ್ದಿಯ ನೆನಪಿಗಾಗಿ ೧೯೬೩ ರಲ್ಲಿ ಬಾಲಕಾಶ್ರಮಕ್ಕೆಂದೇ ಒಂದು ಕಟ್ಟಡವೂ ನಿರ್ಮಾಣವಾಯಿತು.

ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿ ಸಮುದಾಯಕ್ಕೆ ಅನುಕೂಲವಾಗುವಂತಹ ಆಧ್ಯಾತ್ಮಿಕ ಹಾಗೂ ವ್ಯಕ್ತಿತ್ವ ನಿರ್ಮಾಣ ಶಿಬಿರಗಳು, ಬೇಸಿಗೆ ಶಿಬಿರಗಳು ಮತ್ತು ಇತರ ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾಗುವಂತೆ ಸುಸಜ್ಜಿತ ಸಭಾಭವನ, ಬಹೂಪಯೋಗಿ ಭವನ ಹಾಗೂ ಗ್ರಂಥಾಲಯವನ್ನು ಒಳಗೊಂಡ ಕಟ್ಟಡ ಸಂಕೀರ್ಣವನ್ನು ಸಾರ್ವಜನಿಕರ ನೆರವಿನಿಂದ ಇಲ್ಲಿ ನಿರ್ಮಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ಉಚಿತ ತರಬೇತಿ ಕೇಂದ್ರವನ್ನು ಆಶ್ರಮ ನಡೆಸುತ್ತಿದೆ. **ರಾಮಕೃಷ್ಣ ಬಾಲವೃಂದ** ಎಂಬ ಹೆಸರಿನಲ್ಲಿ ಮಕ್ಕಳಿಗೆ ನೈತಿಕ ಹಾಗೂ ಆಧ್ಯಾತ್ಮಿಕ ವಿಷಯಗಳ ಬಗ್ಗೆ ತರಗತಿಗಳನ್ನು ನಡೆಸಲಾಗುತ್ತಿದೆ. ಈ ಆಶ್ರಮದ ಪ್ರಸ್ತುತ ಅಧ್ಯಕ್ಷರಾಗಿರುವವರು **ಸ್ವಾಮಿ ಪೂರ್ಣಕಾಮಾನಂದಜಿ** ಅವರು.



ಮಂಗಳೂರಿನ ರಾಮಕೃಷ್ಣ ಮಠ



ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮ

## ರಾಮಕೃಷ್ಣ ಮಿಷನ್ ಆಶ್ರಮ, ಬೆಳಗಾವಿ

ಸ್ವಾಮಿ ವಿವೇಕಾನಂದರು ಕರ್ನಾಟಕ ರಾಜ್ಯದಲ್ಲಿ ಪದಾರ್ಪಣೆ ಮಾಡಿದ ಪ್ರಪ್ರಥಮ ಸ್ಥಳವೆಂಬ ಹೆಗ್ಗಳಿಕೆ ಬೆಳಗಾವಿಯದು. ಸ್ವಾಮೀಜಿಯವರು ತಂಗಿದ್ದ ಅರಣ್ಯಾಧಿಕಾರಿ ಹರಿಪದ ಮಿತ್ರರ ಮನೆಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಸಾಧ್ಯತೆಯ ಬಗ್ಗೆ ರಾಮಕೃಷ್ಣ ಮಹಾಸಂಘವು ಆಲೋಚಿಸುತ್ತಿತ್ತು. ಈ ಬಗ್ಗೆ ರಾಮಕೃಷ್ಣ ಮಿಷನ್ನಿನೊಂದಿಗೆ ದೀರ್ಘ ಕಾಲ ನಿಕಟ ಸಂಪರ್ಕವಿರುವ ಭಕ್ತರಾದ ಶ್ರೀ ಎಂ.ಎಸ್.ನಂಜುಂಡಯ್ಯ ಅವರಿಗೆ ಈ ಬಗ್ಗೆ ಕಾರ್ಯೋನ್ಮುಖರಾಗಲು ಕೋರಲಾಯಿತು. ಅವರು ಈ ಮನೆ ಇರುವ ಸ್ಥಳವನ್ನು ದಾಖಲೆಗಳ ಆಧಾರದಿಂದ ಪತ್ತೆ ಹಚ್ಚಿದರು. ಆ ಕಟ್ಟಡವು ಸರ್ಕಾರದ ಅರಣ್ಯ ಇಲಾಖೆಯ ವಸತಿಗೃಹವಾಗಿ ಪರಿವರ್ತನೆಗೊಂಡುಬಿಟ್ಟಿತ್ತು. ಆ ಕಟ್ಟಡ ಹಾಗೂ ಸುತ್ತಮುತ್ತಲಿನ ಸ್ವಲ್ಪ ಪ್ರದೇಶವನ್ನು ರಾಮಕೃಷ್ಣ ಮಿಷನ್‌ಗೆ ವಹಿಸಿಕೊಡಬೇಕೆಂದು ೧೯೯೯ರಲ್ಲಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಅಧಿಕೃತ ಮನವಿಯನ್ನು ಸಲ್ಲಿಸಲಾಯಿತು. ೨೦೦೦ ದ ಮೇ ತಿಂಗಳಿನಲ್ಲಿ ರಾಜ್ಯ ಸರ್ಕಾರವು ಈ ಮನವಿಗೆ ಮಾನ್ಯತೆ ನೀಡಿ ಕಟ್ಟಡವನ್ನು ರಾಮಕೃಷ್ಣ ಮಿಷನ್‌ಗೆ ನೀಡಿದ ಆದೇಶವೊಂದನ್ನು ಹೊರಡಿಸಿತು. ರಾಮಕೃಷ್ಣ ಮಹಾಸಂಘದ ಆಡಳಿತ ಮಂಡಳಿಯು ಈ ನಿವೇಶನ ಮತ್ತು ಜಮೀನನ್ನು ವಹಿಸಿಕೊಳ್ಳಲು ಆಗ ಪೊನ್ನಂಪೇಟೆಯ ರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಪುರುಷೋತ್ತಮಾನಂದಜಿಯವರನ್ನು ನೇಮಕ ಮಾಡಿತು. ಅದರಂತೆ ೨೦೦೧ ಜೂನ್ ತಿಂಗಳಿನಿಂದ ಅವರು ಈ ಜವಾಬ್ದಾರಿಯನ್ನು ವಹಿಸಿಕೊಂಡರು. ಅಂದು ಫಲಹಾರಿಣಿ ಕಾಳೀಪೂಜೆಯ ಶುಭದಿನ.

ಕಟ್ಟಡವನ್ನು ಕರ್ನಾಟಕ ಸರ್ಕಾರವು ಮಹಾಸಂಘಕ್ಕೆ ವಹಿಸಿಕೊಟ್ಟಾಗ ಅದು ವಾಸಯೋಗ್ಯವಾಗಿರಲಿಲ್ಲ. ತಜ್ಞರ ನೆರವಿನಿಂದ ಕಟ್ಟಡವನ್ನು ಪರೀಕ್ಷೆಗೆ ಒಳಪಡಿಸಿ ಮೂಲತಃ ಇದ್ದ ಜಾಗ ಯಾವುದು, ಯಾವುದನ್ನು ಕಾಲಾಂತರದಲ್ಲಿ ಸೇರಿಸಲಾಯಿತು ಎಂಬುದರ ಬಗ್ಗೆ ಸಮೀಕ್ಷೆ ನಡೆಸಲಾಯಿತು. ನಂತರ ೧೮೯೨ ರಲ್ಲಿ ಸ್ವಾಮಿ ವಿವೇಕಾನಂದರು ಇದರಲ್ಲಿ ತಂಗಿದ್ದಾಗ ಕಟ್ಟಡವು ಹೇಗಿದ್ದಿತೋ ಹಾಗೆಯೇ ಉಳಿಸಿಕೊಂಡು, ಉಳಿದ ಭಾಗವನ್ನು ತೆಗೆದುಹಾಕಲು ನಿರ್ಧರಿಸಲಾಯಿತು. ಈ ಜೀರ್ಣೋದ್ಧಾರ ಕಾರ್ಯವನ್ನು ಕೈಗೊಳ್ಳಲು ಸುಮಾರು ಆರು ತಿಂಗಳ ಕಾಲ ಬೇಕಾಯಿತು. ಈ ಮಧ್ಯೆ ಸ್ವಾಮಿ ಪುರುಷೋತ್ತಮಾನಂದಜಿ ಅವರು ಬೆಳಗಾವಿ ನಗರದ ಹಲವಾರು ಕಡೆ ಭಜನೆ ಮತ್ತು ಉಪನ್ಯಾಸ ಕಾರ್ಯಕ್ರಮಗಳನ್ನು ಆರಂಭಿಸಿದರು. ದಿವ್ಯತ್ರಯರ ಸಂದೇಶಗಳ ಸಾಹಿತ್ಯದ ಪ್ರಚಾರವೂ ಬಿರುಸಿನಿಂದ ನಡೆಯಿತು. ಆಶ್ರಮದ ಆವರಣದಲ್ಲಿಯೇ ದೇವಸ್ಥಾನದ ನಿರ್ಮಾಣ ಕಾರ್ಯವೂ ಪ್ರಾರಂಭವಾಗಿ, ೨೦೦೩ ರ ಅಕ್ಟೋಬರ್ ಹೊತ್ತಿಗೆ ಪೂರ್ಣಗೊಂಡಿತು. ೨೦೦೪ ರ ಜನವರಿ ೨೧ ರಿಂದ ೨೫ ರವರೆಗೆ ಐದು ದಿನಗಳ ಕಾಲ ವಿಜೃಂಭಣೆಯಿಂದ ನಡೆದ ಉದ್ಘಾಟನಾ ಮಹೋತ್ಸವವು ಬೆಳಗಾವಿಯ ಇತಿಹಾಸದಲ್ಲೇ ಒಂದು ಮಹತ್ವಪೂರ್ಣ ಸಂದರ್ಭವಾಗಿ ದಾಖಲಾಗಿದೆ.

ಪ್ರಸ್ತುತ ಬೆಳಗಾವಿಯ ಆಶ್ರಮವು ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಶಿಬಿರಗಳನ್ನು ನಡೆಸುತ್ತಿರುವುದಲ್ಲದೆ, ಬಡ ವಿದ್ಯಾರ್ಥಿಗಳಿಗೆ ಸಂಜೆಯ ಹೊತ್ತು ಹಾಲು ಮತ್ತು ತಿಂಡಿಯನ್ನು ಉಚಿತವಾಗಿ ವಿತರಿಸುತ್ತಿದೆ. ಇದರ ಜೊತೆಗೆ ಸ್ವಾಮಿ ವಿವೇಕಾನಂದ ಕಂಪ್ಯೂಟರ್ ತರಬೇತಿ ಕೇಂದ್ರ ಮತ್ತು ಬಾಲಕ ಸಂಘಗಳು ಕೂಡ ಕಾರ್ಯನಿರ್ವಹಿಸುತ್ತಿವೆ. ಅಂಗವಿಕಲರಿಗೆ ಗಾಲಿಕುರ್ಚಿಗಳು, ತ್ರಿಚಕ್ರವಾಹನಗಳು ಮುಂತಾದವುಗಳನ್ನು ನೀಡುವುದು, ಆರ್ಥಿಕವಾಗಿ ಹಿಂದುಳಿದವರ ಶ್ರೇಯೋಭಿವೃದ್ಧಿಗಾಗಿ ವಿವಿಧ ಸೇವಾಯೋಜನೆಗಳನ್ನು ಕೈಗೊಳ್ಳುವುದು – ಇವುಗಳಲ್ಲಿ ಬೆಳಗಾವಿ ಆಶ್ರಮವು ನಿರತವಾಗಿದೆ. ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳು, ಪ್ರತಿಭಾಶಾಲಿಗಳಾದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವುದು ಮುಂತಾದ ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಶ್ರಮವು ನಡೆಸುತ್ತಿದೆ. ಇತ್ತೀಚಿಗೆ ಉತ್ತರ ಕರ್ನಾಟಕದಲ್ಲಿ ಉಂಟಾದ ಭಾರಿ ಮಳೆ ಮತ್ತು ಪ್ರವಾಹದಿಂದ ಸಂತ್ರಸ್ತರಾದ ಜನರಿಗೆ ಪರಿಹಾರ ನೀಡುವಲ್ಲಿ ಈ ಆಶ್ರಮವು ಪ್ರಮುಖ ಪಾತ್ರವನ್ನು ವಹಿಸಿತು. ಅದಲ್ಲದೆ, ಸಂತ್ರಸ್ತರಾದ

ಜನರಿಗೆ ಮನೆಗಳನ್ನು ಕಟ್ಟಿಕೊಡುವ ಕಾರ್ಯವನ್ನೂ ಆಶ್ರಮವು ಕೈಗೊಂಡಿದೆ. ಈ ಕೇಂದ್ರದ ಪ್ರಸ್ತುತ ಅಧ್ಯಕ್ಷರಾಗಿರುವವರು **ಸ್ವಾಮಿ ರಾಘವೇಶಾನಂದಜಿ** ಅವರು.

### ಶ್ರೀಶಾರದಾ ಮಠ, ಬೆಂಗಳೂರು

ಶ್ರೀಶಾರದಾ ಮಠವು ಸ್ವತಂತ್ರ ಆಡಳಿತ ನಿರ್ವಹಣೆ ಹೊಂದಿರುವ ಸಂನ್ಯಾಸಿನಿಯರ ಸಂಸ್ಥೆ. ಕರ್ನಾಟಕ ರಾಜ್ಯದಲ್ಲಿ ಇರುವ ಏಕೈಕ ಶಾರದಾ ಮಠವು ಕಂಟೋನ್ಮೆಂಟ್ ರೈಲ್ವೆ ನಿಲ್ದಾಣಕ್ಕೆ ಸ್ವಲ್ಪ ದೂರದಲ್ಲೇ ಇರುವ ನಂದಿದುರ್ಗ ರಸ್ತೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸ್ತ್ರೀಯರಿಗಾಗಿ ಮಠದ ಸ್ಥಾಪನೆಯ ಕಲ್ಪನೆಯು ಸ್ವಾಮಿ ವಿವೇಕಾನಂದರ ಮನಸ್ಸಿನಲ್ಲಿ ಬಹಳ ಮೊದಲಿನಿಂದಲೇ ಇತ್ತು. ೧೮೯೭ ರಲ್ಲಿ ರಾಮಕೃಷ್ಣ ಮಿಷನ್ ಅಸೋಸಿಯೇಶನ್ ಪ್ರಾರಂಭವಾದ ನಂತರ ರೂಪಿಸಿದ ಬೇಲೂರು ಮಠದ ನಿಯಮಗಳಲ್ಲಿ ಮಹಿಳೆಯರು ಸಂನ್ಯಾಸ ಸ್ವೀಕರಿಸುವ ಬಗ್ಗೆ ಹಾಗೂ ಅವರಿಗಾಗಿ ಸ್ವತಂತ್ರವಾದ ಮಠಗಳನ್ನು ಸ್ಥಾಪಿಸುವ ಬಗ್ಗೆ ಸ್ವಾಮಿ ವಿವೇಕಾನಂದರು ಸ್ಪಷ್ಟವಾದ ಸಲಹೆ, ಸೂಚನೆಗಳನ್ನು ನೀಡಿದ್ದರು. ಆದರೆ ಅವು ಕಾರ್ಯರೂಪಕ್ಕೆ ಬರಲು ಸುಮಾರು ಐದು ದಶಕಗಳ ಕಾಲವೇ ಬೇಕಾಯಿತು.

೧೯೫೩, ಡಿಸೆಂಬರ್ ೨೭, ಶ್ರೀಶಾರದಾಮಾತೆಯವರ ಜನ್ಮದಿನೋತ್ಸವದ ಪವಿತ್ರದಿನದಂದು ಆರು ಮಹಿಳೆಯರು ಮಹಾಸಂಘದ ಆಗಿನ ಅಧ್ಯಕ್ಷರಾಗಿದ್ದ ಸ್ವಾಮಿ ಶಂಕರಾನಂದಜಿ ಮಹಾರಾಜ್ ಅವರಿಂದ ಬ್ರಹ್ಮಚರ್ಯ ದೀಕ್ಷೆಯನ್ನು ಸ್ವೀಕರಿಸಿದರು. ಈ ಬ್ರಹ್ಮಚಾರಿಣಿಯರಿಗಾಗಿ ೧೯೫೪ರ ಜುಲೈ ೧೦ ರಂದು ಕೊಲ್ಕತಾದ ಸಿ.ಐ.ಟಿ ರಸ್ತೆಯಲ್ಲಿ ತಾತ್ಕಾಲಿಕ ವಸತಿ ಸೌಕರ್ಯವನ್ನು ಮಾಡಿಕೊಡಲಾಯಿತು. ನಂತರ ೧೯೫೪ ರ ಡಿಸೆಂಬರ್ ೨ ರಂದು ದಕ್ಷಿಣೇಶ್ವರದಲ್ಲಿ ಇವರಿಗಾಗಿ ಶಾಶ್ವತವಾದ ಒಂದು ಕೇಂದ್ರವನ್ನು ನಿರ್ಮಿಸಿಕೊಡಲಾಯಿತು. ೧೯೫೮ ರವರೆಗೂ ಬೇಲೂರು ಮಠದಲ್ಲಿಯೇ ಮಹಿಳೆಯರಿಗೆ ದೀಕ್ಷೆ ನೀಡುವ ಪ್ರಕ್ರಿಯೆ ಮುಂದುವರೆಯಿತು.

ನಂತರ ಈ ಬ್ರಹ್ಮಚಾರಿಣಿಯರ ಆಧ್ಯಾತ್ಮಿಕ ಚಟುವಟಿಕೆಗಳಿಗೆ ಒಂದು ಮಠದ ಸ್ವರೂಪವನ್ನು ನೀಡಲಾಯಿತು. ೧೯೫೪ ರ ಡಿಸೆಂಬರ್ ೨ ರಂದು ಸ್ವಾಮಿ ಶಂಕರಾನಂದಜಿ ಅವರು ಅಧಿಕ ಸಂಖ್ಯೆಯಲ್ಲಿ ಸೇರಿದ್ದ ಹಿರಿಯ ಯತಿವರ್ಯರ ಸಮ್ಮುಖದಲ್ಲಿ ಶ್ರೀಶಾರದಾ ಮಠವನ್ನು ಉದ್ಘಾಟಿಸಿದರು. ಶ್ರೀಶಾರದಾದೇವಿಯವರ ನಿಕಟವರ್ತಿಯಾಗಿದ್ದ ಪ್ರವ್ರಾಜಿಕಾ ಭಾರತೀಪ್ರಾಣಾ (ಸರಳಾ ದೇವಿ) ಅವರಿಗೆ ಈ ಮಠದ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ವಹಿಸಿಕೊಡಲಾಯಿತು. ಪ್ರವ್ರಾಜಿಕಾ ಮುಕ್ತಿಪ್ರಾಣಾ ಅವರು ಕಾರ್ಯದರ್ಶಿಯಾದರು. ಹೀಗೆ ಅಧಿಕೃತವಾಗಿ ಶಾರದಾ ಮಠವು ಪ್ರಾರಂಭವಾಯಿತು. ಕೆಲವು ವರ್ಷಗಳ ಕಾಲ ಈ ಸಂಸ್ಥೆಯು ಬೇಲೂರು ಮಠದ ಟ್ರಸ್ಟಿಗಳ ಮಾರ್ಗದರ್ಶನದಲ್ಲಿಯೇ ನಡೆಯಿತು. ನಂತರ ಇದರ ನಿರ್ವಹಣೆಯ ಸಂಪೂರ್ಣ ಜವಾಬ್ದಾರಿಯನ್ನು ಬ್ರಹ್ಮಚಾರಿಣಿಯರಿಗೆ ವಹಿಸಿಕೊಡಲಾಯಿತು. ೧೯೫೯ ರ ಜನವರಿ ೧ ರಂದು ಶ್ರೀಶಾರದಾ ಮಠದ ಎಂಟು ಹಿರಿಯ ಸದಸ್ಯರಿಗೆ ಸ್ವಾಮಿ ಶಂಕರಾನಂದಜಿ ಅವರು ಸಂನ್ಯಾಸ ದೀಕ್ಷೆಯನ್ನು ನೀಡಿದರು. ೧೯೫೯ ರ ಆಗಸ್ಟ್ ೨೬ ರಂದು ಶ್ರೀಶಾರದಾ ಮಠಕ್ಕೆ ಸ್ವತಂತ್ರ ಸಂಸ್ಥೆಯ ಸ್ಥಾನವನ್ನು ನೀಡಿದ್ದರಿಂದ ಸಂನ್ಯಾಸಿನಿಯರೇ ಅದರ ಟ್ರಸ್ಟಿಗಳಾದರು.

ಹೀಗೆ ಪ್ರಾರಂಭಗೊಂಡ ಶ್ರೀಶಾರದಾ ಮಠವು ಸುಮಾರು ಒಂದೂವರೆ ದಶಕ ಕಳೆಯುವಷ್ಟರಲ್ಲಿ ಬೆಂಗಳೂರಿಗೂ ಪದಾರ್ಪಣೆ ಮಾಡಿತು. ೧೯೭೫ ರ ಜನವರಿ ೧೮ ರಂದು ಬೆಂಗಳೂರಿನ ಮಲ್ಲೇಶ್ವರದ ಅನುಸೂಯ ಸುಬ್ರಹ್ಮಣ್ಯಮ್ ಎಂಬ ಭಕ್ತರೊಬ್ಬರ ಮನೆಯಲ್ಲಿ **ಶಾರದಾ ಮಿಷನ್ ಕೇಂದ್ರವು** ಶ್ರೀಶಾರದಾ ಮಠ ಮತ್ತು ರಾಮಕೃಷ್ಣ ಶಾರದಾ ಮಿಷನ್ನಿನ ಕಾರ್ಯದರ್ಶಿಯವರಾಗಿದ್ದ ಪ್ರವ್ರಾಜಿಕ ಮುಕ್ತಿಪ್ರಾಣಾ ಅವರಿಂದ ಸರಳವಾದ ರೀತಿಯಲ್ಲಿ ಪ್ರಾರಂಭವಾಯಿತು. ಅನಂತರ ಇದು ಒಂದು ಬಾಡಿಗೆ ಮನೆಗೆ ವರ್ಗಾಯಿಸಲ್ಪಟ್ಟಿತು.

ಮಠದ ಅಭಿವೃದ್ಧಿಗಾಗಿ ಆಗಿನ ಸರ್ಕಾರ ಬೆಂಗಳೂರಿನ ನಂದಿದುರ್ಗ ರಸ್ತೆಯಲ್ಲಿ ೪ ಎಕರೆ ೭ ಗುಂಟೆ ನಿವೇಶನವನ್ನು


ಬೆಂಗಳೂರಿನ ಶ್ರೀಶಾರದಾ ಮಠ